# IN THE COURT OF THE ADDL. SENIOR CIVIL JUDGE & JMFC., GUBBI
# **OS – 300/2024**

Witness present and duly sworn on : 28.01.2026.

Cross Examination by Counsel for Plaintiff :

ನಾನು 9ನೇ ತರಗತಿಯವರೆಗೆ ವಿಧ್ಯಾಭ್ಯಾಸ ಮಾಡಿದ್ದೇನೆ. ನನ್ನ ತಾತ ಚಿಕ್ಕೆಗೌಡರವರಿಗೆ 6 ಜನ ಮಕ್ಕಳು. ಅವರುಗಳು ರಂಗಣ್ಣ, ತಿಮ್ಮಯ್ಯ, ಗುಂಡಯ್ಯ, ತೋಪೆಗೌಡ, ರಾಜಣ್ಣ, ಪಾಂಡುರಂಗಯ್ಯ. ಚಿಕ್ಕೆಗೌಡರವರಿಗೆ 5 ಜನ ಹೆಣ್ಣು ಮಕ್ಕಳು ಅವರುಗಳು ಭಾಗ್ಯಮ್ಮ, ರಂಗಮ್ಮ, ಲಲಿತಮ್ಮ, ಸಾವಿತ್ರಮ್ಮ, ರತ್ನಮ್ಮ. ನಾನು ಗುಂಡಯ್ಯ ರವರ ಮಗ ಎಂದರೆ ಸರಿ. 2ನೇ ಪ್ರತಿವಾದಿ ಗೀತಾ ನನ್ನ ಹೆಂಡತಿ ಎಂದರೆ ಸರಿ. ಚಿಕ್ಕೆಗೌಡರವರ 6 ಜನ ಗಂಡು ಮಕ್ಕಳು 1969 ರಲ್ಲಿ ವಿಭಾಗ ಮಾಡಿಕೊಂಡು ಬೇರೆ ಬೇರೆ ವಾಸ ಇದ್ದರು ಎಂದರೆ ಸರಿ. ಸದರಿ ವಿಭಾಗದ ಮೂಲ ದಾಖಲೆಯು ನನ್ನ ತಂದೆ ಗುಂಡಯ್ಯ ರವರ ಹತ್ತಿರ ಇತ್ತು ಎಂದರೆ ಸರಿಯಲ್ಲ.

ಮೂದಿಗೆರೆ ಗ್ರಾಮದ ಸರ್ವೆ ನಂ.66 ರ ಒಟ್ಟು ವಿಸ್ತೀರ್ಣ ನನಗೆ ಗೊತ್ತಿಲ್ಲ. ಸದರಿ ಜಮೀನಿನಲ್ಲಿ ನನ್ನ ತಂದೆ ಮತ್ತು ಅವರ ಸಹೋದರರಿಗೆ ಎಷ್ಟು ಜಮೀನು ಹೋಗಿದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆಯ ಭಾಗದ ಮಾಹಿತಿ ಮಾತ್ರ ಇರುತ್ತದೆ. ನನ್ನ ತಂದೆಗೆ ಸರ್ವೆ ನಂ.66/4 ರಲ್ಲಿ 1 ಎಕರೆ 3 ಗುಂಟೆ ಬಂದಿರುತ್ತದೆ. ಸರ್ವೆ ನಂ.66 ಪೋಡಿಯ ನಂತರ ಸರ್ವೆ ನಂ.66/4 ಆಗಿದೆ ಎಂದರೆ ಸರಿ. ವಾದಿ ಗಂಗಮ್ಮ ರವರ ಗಂಡನಾದ ರಾಜಣ್ಣ ರವರಿಗೂ ಸಹ ಸರ್ವೆ ನಂ.66 ರಲ್ಲಿ 1 ಎಕರೆ 3 ಗುಂಟೆ ಜಮೀನು ಭಾಗದಲ್ಲಿ ಬಂದಿತ್ತು ಎಂದರೆ ಸರಿ.

ಸರ್ವೆ ನಂ.65 ರಲ್ಲಿ ನನ್ನ ತಂದೆಗೆ 16 ಗುಂಟೆ ಜಮೀನು ಬಂದಿತ್ತು. ಅದೇ ರೀತಿ ಸದರಿ ಜಮೀನಿನಲ್ಲಿ ರಾಜಣ್ಣ ರವರಿಗೂ ಸಹ 16 ಗುಂಟೆ ಜಮೀನು ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.66 ರಲ್ಲಿ 1 ರಿಂದ 6 ಪೋಡಿಗಳಾಗಿವೆ ಎಂದರೆ ಸರಿ. ಪೋಡಿಯ

ನಂತರ ಸರ್ವೆ ನಂ.66/1 ರಲ್ಲಿ 1 ಎಕರೆ 3 ಗುಂಟೆ ಮತ್ತು ಸರ್ವೆ ನಂ.65/6 ರಲ್ಲಿ 16 ಗುಂಟೆ ವಾದಿಯ ಗಂಡ ರಾಜಣ್ಣ ರವರ ಹೆಸರಿಗೆ ಖಾತೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. MR No.7/1994-95 ಆಧಾರದ ಮೇಲೆ ರಾಜಣ್ಣ, ನನ್ನ ತಂದೆ ಮತ್ತು ಅವರ ಸಹೋದರರ ಹೆಸರಿಗೆ ಖಾತೆ ಬದಲಾವಣೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ.

ವಿಭಾಗದ ಸಮಯದಲ್ಲಿ ಅಳತೆ ಕಾರ್ಯ ಮಾಡಿಸದೆ ಸ್ವಾಧೀನದಂತೆ ಆಸ್ತಿಗಳನ್ನು, ನನ್ನ ತಂದೆ, ರಾಜಣ್ಣ ಅವರ ಸಹೋದರರು ಹಂಚಿಕೊಂಡರು ಎಂದರೆ ನನಗೆ ಗೊತ್ತಿಲ್ಲ. 1969 ರಿಂದ 2023 ತನಕ ನನ್ನ ತಂದೆ, ರಾಜಣ್ಣ ಮತ್ತು ಅವರ ಸಹೋದರರು ಆಸ್ತಿಗಳನ್ನು ಅನುಭವಿಸುಕೊಂಡು ಬರುತ್ತಿದ್ದರು ಎಂದರೆ ಸರಿ. ರಾಜಣ್ಣ ಮತ್ತು ನನ್ನ ತಂದೆ ಗುಂಡಯ್ಯನವರು ಮರಣ ಹೊಂದಿದ್ದಾರೆಂದರೆ ಸರಿ. ರಾಜಣ್ಣ ರವರ ಮರಣದ ನಂತರ ಅವರ ಹೆಂಡತಿಯಾದ ಗಂಗಮ್ಮ ರವರ ಹೆಸರಿಗೆ ಸರ್ವೆ ನಂ.66/1 ರಲ್ಲಿ 1 ಎಕರೆ 3 ಗುಂಟೆ ಮತ್ತು ಸರ್ವೆ ನಂ.65/6 ರಲ್ಲಿ 16 ಗುಂಟೆ ಖಾತೆ ಪಹಣಿ ಬದಲಾವಣೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಮರಣದ ನಂತರ ನನ್ನ ಮತ್ತು ನನ್ನ ಹೆಂಡತಿಯ ಹೆಸರಿಗೆ ಸರ್ವೆ ನಂ.66/4 ರಲ್ಲಿ 1 ಎಕರೆ 3 ಗುಂಟೆ ಮತ್ತು ಸರ್ವೆ ನಂ.65/5 ರಲ್ಲಿ 16 ಗುಂಟೆ ಖಾತೆ ಪಹಣಿ ಬದಲಾವಣೆ ಮಾಡಿಸಿಕೊಂಡಿದ್ದೇವೆಂದರೆ ಸರಿ. ಸದರಿ ಖಾತೆ ಪಹಣಿ ಬದಲಾವಣೆ ಸಮಯದಲ್ಲಿ ವಾದಿ ಗಂಗಮ್ಮ ಮತ್ತು ನಾವುಗಳು ಅಳತೆ ಮಾಡಿಸಿಕೊಳ್ಳಲಿಲ್ಲ ಎಂದರೆ ಸರಿ.

ಗಂಗಮ್ಮ ರವರ ಜಮೀನುಗಳಲ್ಲಿ ತೆಂಗಿನ ತೋಟ ಮತ್ತು ಫಾರ್ಮ ಹೌಸ ಇದೆ ಎಂದರೆ ಸರಿ. ರಾಜಣ್ಣ ಮತ್ತು ನನ್ನ ತಂದೆ ಅವರ ಜೀವಿತಕಾಲದಲ್ಲಿ ಅಳತೆ ಮಾಡಿಸಿರಲಿಲ್ಲ ಎಂದರೆ ಸರಿ. ದಾವಾ ಐಟಂ ನಂ.1 ಮತ್ತು 2 ಆಸ್ತಿಗಳ ದಕ್ಷಿಣಕ್ಕೆ ನನ್ನ ಜಮೀನುಗಳು ಇವೆ ಎಂದರೆ ಸರಿ. ವಾದಿ ಗಂಗಮ್ಮ ರವರು ಅಳತೆ ಮಾಡಿಸಲು 2023 ರಲ್ಲಿ ಸರ್ವೆ ಇಲಾಖೆಗೆ ಅರ್ಜಿ ನೀಡಿದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಅರ್ಜಿಯನ್ನು ನೀಡಿದ ನಂತರ ಸರ್ವೆ ಅಧಿಕಾರಿಗಳು ನನಗೆ, ನನ್ನ ಹೆಂಡತಿ ಮತ್ತು ಇತರರಿಗೆ ನೋಟಿಸ್ ನೀಡಿದರು ಎಂದರೆ ಸರಿಯಲ್ಲ. ಸದರಿ ನೋಟಿಸ್ ಗೆ ನಾನು ಮತ್ತು ನನ್ನ ಹೆಂಡತಿ ಸಹಿ ಮಾಡಿದ್ದೇವೆಂದರೆ ಸರಿಯಲ್ಲ. ಸಾಕ್ಷಿಗೆ ಈ ಸಮಯದಲ್ಲಿ ನೋಟಿಸ್ ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯಲ್ಲಿ ನನ್ನ ಸಹಿ ಇದೆ ಎಂದರೆ ಸರಿ. **ಸಾಕ್ಷಿಯು ಸದರಿ ದಾಖಲೆಯಲ್ಲಿ ಆತನ ಸಹಿಯನ್ನು ಒಪ್ಪಿರುವ ಕಾರಣ ನೋಟಿಸ್ ನ್ನು ನಿಪಿ-19 ಮತ್ತು ಅದರಲ್ಲಿ ಇರುವ ಸಾಕ್ಷಿಯ**

**ಸಹಿಯನ್ನು ನಿಪಿ-19 (ಎ) ಎಂದು ಗುರುತಿಸಲಾಯಿತು.** ಸಾಕ್ಷಿ ಮುಂದುವರೆದು ಸದರಿ ಸಹಿಯನ್ನು ನಾನು 2023 ರಲ್ಲಿ ಮಾಡಿರುವುದಿಲ್ಲ. ಸದರಿ ಸಹಿಯನ್ನು ನಾನು 2023 ನೋಟಿಸ್ ರಲ್ಲಿ ಮಾಡಿದ್ದರು ಸಹ ಸುಳ್ಳು ಹೇಳುತ್ತಿದ್ದೇನೆಂದರೆ ನನಗೆ ನೆನಪಿಲ್ಲ. ಸಾಕ್ಷಿ ಮುಂದುವರೆದು ಇತ್ತಿಚೀನ ಅಳತೆ ಕಾರ್ಯದ ಬಗ್ಗೆ ನನಗೆ ಗೊತ್ತಿರುವುದಿಲ್ಲ.

ಸದರಿ ಅಳತೆಯ ಕಾರ್ಯದ ನಂತರ ಸರ್ವೆ ಅಧಿಕಾರಿಗಳು ನಾವು ದಾವಾ ಐಟಂ ನಂ.1 ರ ದಕ್ಷಿಣ ದಿಕ್ಕಿನಲ್ಲಿ 06.08 ಗುಂಟೆ ಮತ್ತು ದಾವಾ ಐಟಂ ನಂ.2 ರ ದಕ್ಷಿಣ ದಿಕ್ಕಿನಲ್ಲಿ 2 ಗುಂಟೆಯನ್ನು ಒತ್ತುವರಿ ಮಾಡಿರುವ ಬಗ್ಗೆ ವರದಿ ಸಲ್ಲಿಸಿದ್ದಾರೆಂದರೆ ನನಗೆ ಗೊತ್ತಿಲ್ಲ. ಸದರಿ ಒತ್ತುವರಿ ಮಾಡಿರುವ ಜಾಗವನ್ನು ಸರ್ವೆ ಅಧಿಕಾರಿಗಳು ವಾದಿ, ನಮಗೆ ಮತ್ತು ಇತರರಿಗೆ ತೋರಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಸರ್ವೆ ನೋಟಿಸ್ ಗೆ ನಾನು ಸಹಿ ಮಾಡಿಲ್ಲ ಮತ್ತು ಅಳತೆ ಆಗಿರುವ ಕೆಲಸದ ಮಾಹಿತಿ ನನಗೆ ಗೊತ್ತಿಲ್ಲ. ಒತ್ತುವರಿ ಮಾಡಿರುವ ಜಾಗವನ್ನು ನಮಗೆ ತೋರಿಸಿ ಮತ್ತು ಒತ್ತುವರಿ ಜಾಗವನ್ನು ನಾವು ಬಿಟ್ಟಿದ್ದೇವೆ ಎಂದು ಹೇಳಿದ ಮೇರೆಗೆ ಸ್ಥಳದಲ್ಲಿ ಪಂಚನಾಮೆ ಬರೆದಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ಪಂಚನಾಮೆಗೆ ನಾನು ಮತ್ತು ನನ್ನ ಹೆಂಡತಿ ಸಹಿ ಮಾಡಿದ್ದೇವೆಂದರೆ ಸರಿಯಲ್ಲ. ಪಂಚನಾಮೆಯಲ್ಲಿ ನನ್ನ ಮತ್ತು ನನ್ನ ಹೆಂಡತಿಯ ಸಹಿ ಇದ್ದರು ಸಹ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಒತ್ತುವರಿ ಮಾಡಿರುವ ಜಾಗವನ್ನು ನಾವು ಇಲ್ಲಿಯವರೆಗೂ ವಾದಿಗೆ ಬಿಟ್ಟುಕೊಟ್ಟಿಲ್ಲ ಎಂದರೆ ಸರಿ.

(Further cross-examination deferred at the request of the counsel for the plaintiff)

(Typed to my dictation in open court)

R.O.I & A.C.

Addl. Senior Civil Judge and
JMFC., Gubbi